

# ಮದುವೆ, ಮಕ್ಕಳು ನಟನೆಗೆ ಅಡ್ಡಿಯಲ್ಲ...

'ದಿಯಾ' ಸಿನಿಮಾ ಮೂಲಕ ಕನ್ನಡ ಸಿನಿಮಾರಂಗದಲ್ಲಿ ಅಲ್ಪಾವಧಿಯಲ್ಲೇ ಜನಪ್ರಿಯತೆ ಪಡೆದ ನಟಿ ಖುಷಿ ರವಿ, ಈಚೆಗೆ ತೆಲುಗು ಸಿನಿಮಾವೊಂದರ ಶೂಟಿಂಗ್ ಮುಗಿಸಿ ಬಂದಿದ್ದಾರೆ.

ಬೇರೆ ಬೇರೆ ಭಾಷೆಗಳ ಸಿನಿಮಾರಂಗದ ಅನುಭವಗಳನ್ನು ತಮ್ಮದಾಗಿಸಿಕೊಳ್ಳುತ್ತಿರುವ ಅವರು, ದಕ್ಷಿಣ ಭಾರತದ ಸಿನಿಮಾರಂಗಗಳ ನಡುವಿನ ಚೌಕಟ್ಟು, ಗಡಿ ಮಸುಕಾಗುತ್ತಿದೆ ಎಂದಿದ್ದಾರೆ. ಚೌಕಟ್ಟು ಮಾತ್ರವಲ್ಲದೆ, ದೃಷ್ಟಿಕೋನದಲ್ಲೂ ಪರಿವರ್ತನೆ ಆಗಿರುವುದಾಗಿ ಹೇಳುತ್ತಾರೆ.

ಮದುವೆಯಾದ ನಂತರವೂ ನಟಿಯರಿಗೆ ಉತ್ತಮ ಪಾತ್ರಗಳು ದೊರೆಯುತ್ತಿವೆ. ನಟನೆಗೆ ವಿವಾಹಿತೆ ಅಥವಾ ತಾಯಿಯಾಗಿರುವುದು ಅಡ್ಡಿಯಾಗಲಾರದು. ಇದಕ್ಕೆ ನಾನೂ ಉದಾಹರಣೆ ಎಂದಿದ್ದಾರೆ. 'ಮದುವೆಯಾಗಿದೆ ಎಂಬ ಕಾರಣಕ್ಕೆ ಚಿಕ್ಕಪುಟ್ಟ ಪಾತ್ರಗಳಿಗೆ ತಮ್ಮನ್ನು ತಾವು ಸೀಮಿತಗೊಳಿಸಿಕೊಳ್ಳಬೇಕಿಲ್ಲ. ಈ ವಿಷಯದಲ್ಲಿ ಸಿನಿಮಾರಂಗದಲ್ಲಿ ಬದಲಾವಣೆ ಕಾಣುತ್ತಿರುವುದು ಒಳ್ಳೆಯ ವಿಷಯ' ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ದಿಯಾ ಸಿನಿಮಾ ಯಶಸ್ಸಿನ ನಂತರ ತೆಲುಗು ಸಿನಿಮಾದೆಡೆಗೂ ಮುಖ ಮಾಡಿರುವ ಅವರು, ಆ ಸಿನಿಮಾ ಯಶಸ್ಸು ಹಲವು ಹಾದಿಗಳನ್ನು ತೆರೆದಿದ್ದಾಗಿ ಹೇಳುತ್ತಾರೆ. 'ನನ್ನ ಕರಿಯರ್‌ನಲ್ಲಿ ದಿಯಾ ಸಿನಿಮಾ ಒಂದು ಮೈಲುಗಲ್ಲಾಯಿತು' ಎಂದು ಸ್ಮರಿಸಿಕೊಂಡಿದ್ದಾರೆ.

ದಿ ಗ್ರೇಟ್ ಸ್ಟೋರಿ ಆಫ್ ಸೋಡಾಬುಡ್ಡಿ, ದಿಯಾ, ಸ್ಪೂಕಿ ಕಾಲೇಜ್ ಹಾಗೂ ನಕ್ಷೆ ಕನ್ನಡ ಸಿನಿಮಾಗಳಲ್ಲಿ ನಟಿಸಿದ್ದಾರೆ ಖುಷಿ. ■



## ಗೆಲುವಿನ ಖುಷಿಯಲ್ಲಿ

# ಶಶಾಂಕ್

ಈಚೆಗೆ ಬಿಡುಗಡೆಯಾದ 'ಕೌಸಲ್ಯಾ ಸುಪ್ರಜಾ ರಾಮ' ಸಿನಿಮಾ, ಪ್ರೇಕ್ಷಕರಿಂದ ಹೊಗಳಿಕೆಯ ಸುರಿಮಳೆಯನ್ನೇ ಪಡೆದುಕೊಂಡಿದೆ. ಎಲ್ಲೆಲ್ಲೂ ಸಿನಿಮಾ ಬಗ್ಗೆ ಪಾಸಿಟಿವ್ ಪ್ರತಿಕ್ರಿಯೆ ದೊರೆತಿರುವುದು, ನಿರ್ದೇಶಕ ಶಶಾಂಕ್ ಅವರಲ್ಲೂ ಮತ್ತಷ್ಟು ಉತ್ಸಾಹ ತುಂಬಿದಂತಿದೆ. ಇದರ ಬೆನ್ನಲ್ಲೇ, ಈ ಸಿನಿಮಾದ ಮತ್ತೊಂದು ಭಾಗ ಹೊರತರುವ ಸುದ್ದಿಯೂ ಕೇಳಿಬರುತ್ತಿದೆ.

ಜುಲೈ 28ರಂದು ಬಿಡುಗಡೆಯಾದ 'ಕೌಸಲ್ಯಾ ಸುಪ್ರಜಾ ರಾಮ' ಸಿನಿಮಾದಲ್ಲಿ ಡಾರ್ಲಿಂಗ್ ಕೃಷ್ಣ, ಬೃಂದಾ ಆಚಾರ್ಯ, ಮಿಲನಾ ನಾಗರಾಜ್ ಪ್ರಮುಖ ತಾರಾಗಣದಲ್ಲಿದ್ದರು. ತಾಯಿಯನ್ನು ಕೇಂದ್ರವಾಗಿಟ್ಟುಕೊಂಡು, ಪುರುಷಾಹಂಕಾರ ಪ್ರಶ್ನಿಸುವ ಕಥಾಹಂದರದಲ್ಲಿ ಮೂಡಿಬಂದ ಈ ಸಿನಿಮಾ ಕುರಿತು ಎಲ್ಲ ಕಡೆಯಿಂದ ಉತ್ತಮ ಪ್ರತಿಕ್ರಿಯೆಗಳು ದೊರೆತವು.

ಈ ಪ್ರತಿಕ್ರಿಯೆ ಶಶಾಂಕ್ ಅವರಿಗೆ ಮತ್ತಷ್ಟು ಉತ್ತೇಜನ ನೀಡಿವೆಯಂತೆ. 'ಈ ಸಿನಿಮಾ ನೋಡಿ ಜನರು ಭಾವುಕರಾಗಿದ್ದನ್ನು ಕಂಡೆ. ಭಾವನೆಗಳನ್ನು ಕೇಂದ್ರವಾಗಿಟ್ಟುಕೊಂಡ ಸಿನಿಮಾಗಳು ಎಂದಿಗೂ ಜನರ ಮನ ಗೆಲ್ಲುತ್ತವೆ ಹಾಗೂ ಮನಸ್ಸಿನಲ್ಲಿ ಉಳಿಯುತ್ತವೆ ಎಂಬುದಕ್ಕೆ ಈ ಸಿನಿಮಾ ಮತ್ತೊಂದು ಸಾಕ್ಷಿಯಾಯಿತು. ಎಷ್ಟೋ ಜನರ ಜೀವನಕ್ಕೆ ಹತ್ತಿರವಾದ ಮತ್ತು ಪುರುಷ ದುರಭಿಮಾನದ ವಿಷಯದ ಕುರಿತು ನಿಜ ಜೀವನಕ್ಕೆ ಹತ್ತಿರವಾದ ವಿಷಯ ಇದು. ಈ ಸಿನಿಮಾಗೆ ನಾವು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿಗೆ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿದೆ' ಎಂದು ಹರ್ಷದಿಂದ ಮಾತನಾಡಿದ್ದಾರೆ ಶಶಾಂಕ್.

'ಈ ಸಿನಿಮಾ ಬಿಡುಗಡೆ ನಂತರ ತೆಲುಗು ಹಾಗೂ ತಮಿಳಿನಲ್ಲಿ ರೀಮೇಕ್‌ಗೆಂದು ಹಲವು ಪ್ರೊಡಕ್ಷನ್ ಹೌಸ್‌ಗಳು ಮುಂದೆ ಬಂದಿವೆ. ಆದರೆ ಈ ಬಗ್ಗೆ ಇನ್ನೂ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ. ಈ ಸಿನಿಮಾದ ಮತ್ತೊಂದು ಸೀಕ್ವೆಲ್ ಮಾಡಬಹುದೆ ಎಂಬ ಆಲೋಚನೆಯೂ ಬಂದಿದೆ. ಈ ಸಿನಿಮಾ ಕಥೆಯಲ್ಲಿ ಹಲವು ಪದರಗಳಿದ್ದು, ಅದೇ ಒಂದು ಸೀಕ್ವೆಲ್ ಆಗಬಹುದು. ಆದರೆ ಸ್ಕ್ರಿಪ್ಟ್ ಬಗ್ಗೆ ಯಾವುದೇ ಯೋಚನೆ ಮಾಡಿಲ್ಲ' ಎಂದು ಮತ್ತೊಂದು ಸಿನಿಮಾ ಮಾಡುವ ಸುಳಿವು ಕೊಟ್ಟಿದ್ದಾರೆ. ■